ರೀತಿ ನಮಗೆ ನೋವಾಗುತ್ತದೆ.

ಡಾ. ಜೀವರಾಜ ಆಳ್ವ : ಸಿಓಡಿ ಮುಖ ನೀವು ಹೇಳಿದ ತರಹದಲ್ಲಿ ತಿರುಗಿದ್ದರೆ ಸಂತೋಷ. As on now, it is so painful, The police officer whoever has harassed or whoever has motivated Dr. Thimmapaiah or Sri Krishnakant to seek anticipatory bail, that officer will have to be punished. ಇದು ಏನೋ ಒಂದು ಹೋಗಿ ಏನೋ ಒಂದು ಆಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಅನಿಸಿಕೆ ಅರ್ಥವಾಗಿದೆ. ಯಾರಾದರೂ ಪೋಲೀಸ್ ಅಧಿಕಾರಿಗಳು ಈ ಒಂದು ಪೀಡನೆಗೆ, ಹಿಂಸೆಗೆ ಮತ್ತು ಯಾವುದೇ ರೀತಿಯ ತೊಂದರೆಗೆ ಕಾರಣವಾಗಿದ್ದರೆ ನಾವು ಅದನ್ನು ಗುರುತಿಸಿ ಆ ಬಗ್ಗೆ ಕೂಡ ತನಿಖೆ ಮಾಡುತ್ತೇವೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಶ್ರೀಮತಿ ಗಂಗರತ್ನಮ್ಮನ ಮಗು ಅದಲು ಬದಲಾಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 5ನೇ ತಾರೀಖು ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಆಗತಾನೇ ಹೆರಿಗೆಯಾದಂತಹ ಮಕ್ಕಳನ್ನು ಅದಲುಬದಲು ಮಾಡಿರುವಂಥಾದ್ದು ಪ್ರಕಟವಾಗಿದೆ. ಈ ಮಧ್ಯೆ ಕುಷ್ಟಗಿ ಹಗರಣ ಬಂದಿದ್ದರಿಂದಲೂ, ತುಂಬಾ ಪ್ರಾಮುಖ್ಯವಾಗಿದ್ದರಿಂದಲೂ ನಾವು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಆಗಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಈ ತಾಯಿಯ ಕುಡಿಯನ್ನೇ ಅದಲುಬದಲು ಮಾಡುವಂಥಾದ್ದು, ಮತ್ತು ಎಳೆಯ, ಹಸುಳೆಗಳನ್ನು ಅಕ್ರಮ ವ್ಯವಹಾರ ಮಾಡವಂಥಾದ್ದು, ಆ ಮಕ್ಕಳನ್ನು ಮಾರುವಂಥಾದ್ದು, ಹೆಣ್ಣುಮಕ್ಕಳಾದರೆ 5 ರಿಂದ 6 ಸಾವಿರದವರೆಗೆ ಮಾರುವುದು, ಗಂಡು ಮಕ್ಕಳಾದರೆ 8 ರಿಂದ 10 ಸಾವಿರದವರೆಗೆ ಮಾರುವುದು, ಇದು ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಮತ್ತು ಇತರ ಕಡೆ ನಡೆಯುತ್ತಿದೆ. ಇಂತಹ ಅನೇಕ ಘಟನೆಗಳು ನಡೆದಿದ್ದು ಸಂಬಂಧಪಟ್ಟವರು ಕೊಟ್ಟಿರುವಂತಹ ದೂರುಗಳು ಇವೆ. ಅವುಗಳನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಈ ಸಮಯದಲ್ಲಿ ನಡೆದಿರುವಂತಹ, ನೇರವಾದಂತಹ ವಿಷಯಗಳಿಂದರೆ, ಬೆಂಗಳೂರಿನ ಗ್ರಾಮಾಂತರದ ಹತ್ತಿರ ಇದ್ದಂತಹ ಗಂಗ ರತ್ನಮ್ಮ ಎಂಬುವವರಿಗೆ ಹೋದ ಮಂಗಳವಾರ ವಾಣಿವಿಲಾಸ ಆಸ್ಪತ್ರೆಯಲ್ಲಿ ಹೆರಿಗೆಯಾಯಿತು. ಬೆಳಿಗ್ಗೆ 10-30ಕ್ಕೆ ಒಂದು ಗಂಡು ಮಗುವಿಗೆ ಜನ್ಮ ನೀಡಿದಳು. ಆ ಗಂಡು ಮಗು ಹುಟ್ಟಿದ ತಕ್ಷಣ, ಅಧಕ್ಕೆ ಗುರುತಿನ ಚೀಟಿ ಹಾಕಿ, ಅದು ತುಂಬ ನಿಶ್ಯಕ್ತವಾಗಿದೆ ಎಂದು ಇನ್‌ಕ್ಯೂಬಿಲೇಟರ್‌ನಲ್ಲಿ ಇಟ್ಟು ಮಗುವನ್ನು ಉಳಿಸುವುದಕ್ಕೋಸ್ಕರ ತೆಗೆದುಕೊಂಡು ಹೋದರು. ಆ ಮಗು ಹೆರಿಗೆಯಾಗುವಂತಹ ಸಂದರ್ಭದಲ್ಲಿ ಅವರ ಸಂಬಂಧಿಕರಾದ ಶಾಂತಮ್ಮ ಎನ್ನುವವರು ಪಕ್ಕದಲ್ಲೇ ಇದ್ದರು. ಗಂಡು ಮಗು ಹುಟ್ಟಿದ ತಕ್ಷಣ ಆ ಮಗುವನ್ನು ತೋರಿಸಿದರು. ಮಾರನೇ ದಿವಸ ಅಂದರೆ ಬುಧವಾರ ಬೆಳಿಗ್ಗೆ ಮಗುವಿಗೆ ಹಾಲು ಕುಡಿಸುವುದಕ್ಕೆ ಮೇಲ್ಗಡೆ ಕರೆದುಕೊಂಡು ಹೋದರು. ಹಾಲು ಕುಡಿಸುವುದಕ್ಕೆ ಹೋದಾಗ ಗಂಡು ಮಗುವನ್ನು ಬಿಟ್ಟು ಹೆಣ್ಣುಮಗುವಿಗೆ ಹಾಲು ಕುಡಿಸು ಎಂದು ಹೇಳಿದರು. ಯಾವ ತಾಯಿಯ ಮನಸ್ಸು ತನ್ನ ಮಗು ಅಲ್ಲದಿದ್ದಕ್ಕೆ ಹಾಲು ಕುಡಿಸುವುದಕ್ಕೆ ಒಪ್ಪುತ್ತದೆ. ಇದು ಮಾನವೀಯತೆಯ ಪ್ರಶ್ನೆ. ಸಹಜವಾಗಿ ಆಕೆ ಇದನ್ನು ಪ್ರತಿಭಟಿಸಿದಳು. ಆದರೆ ಅವರು ಇದು ನಿನ್ನದೇ ಮಗು ಎಂದು ಒತ್ತಾಯ ಮಾಡುವಂತಹ ಪ್ರಯತ್ನ ಮಾಡಿದರು. ಇದು ಅವಳ ಸಂಬಂಧಿಕಳಾದ ಶಾಂತಮ್ಮನಿಗೆ

ಇಲ್ಲಿ ಏನೋ ನಡೆಯುತ್ತಾ ಇದೆ ಎಂದು ಗೊತ್ತಾಯಿತು. ಹೆರಿಗೆ ಆದಂತಹ ಗಂಗರತ್ನಮ್ಮ ಕಣ್ಮೀರು ಹಾಕುವುದಕ್ಕೆ ಶುರು ಮಾಡಿದಳು. ಜನ ಸೇರಿದರು. ಆ ಹೆಣ್ಣುಮಗಳು ಓಡಿಹೋಗಿ ಬುದ್ಧಿವಂತಿಕೆಯಿಂದ ಆ ಮಗು ಹುಟ್ಟಿದಂತಹ ಸಂದರ್ಭದಲ್ಲಿ ಕೊಟ್ಟಂತಹ ಡಾಕ್ಯುಮೆಂಟ್ಸ್ ಏನು ಇತ್ತು ಅದನ್ನು ತೆಗೆದುಕೊಂಡು ಇಟ್ಟುಕೊಂಡಳು. ಇದಾದ ಮೇಲೆ ನಿಮ್ಮದು ಹೆಣ್ಣುಮಗು ಅಲ್ಲ ವ್ಯತ್ಯಾಸವಾಗಿದೆ ಎಂದು ಹೇಳಿ ಇನ್ನೊಂದು ಸತ್ತ ಗಂಡು ಮಗುವನ್ನು ತೋರಿಸಿದರು. ಇದರ ಬಗ್ಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ದೂರು ನೀಡಿದರು. ಇದನ್ನು ಸರಿಪಡಿಸುತ್ತೇವೆ ಎನ್ನುವಂತಹ ಪ್ರಯತ್ನ ಮಾಡಿದರು. ಆದರೆ ಇದುವರೆಗೂ ಮಗು ಸಿಕ್ಕಿಲ್ಲ. ಹೆರಿಗೆಯಾಗಿರುವಂತಹ ಬಾಣಂತಿ, ಅವರ ಮಕ್ಕಳು ಮರಿ ಆಸ್ಪತ್ರೆ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರನ್ನು ಕೇಳುವವರು ಯಾರು ಇಲ್ಲದಂತಹ ಪರಿಸ್ಥಿತಿ ಬಂದಿದೆ. ನಾನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಪಡುವುದೇನೆಂದರೆ, ಅಲ್ಲಿ ಗಂಡು ಮಕ್ಕಳನ್ನು ಮಾರುವುದು, ಹೆಣ್ಣುಮಕ್ಕಳನ್ನು ಮಾರುವುದು ಈ ರೀತಿಯ ಘಟನೆಗಳು ಅನೇಕ ದಿವಸಗಳಿಂದ ನಡೆಯುತ್ತಿದೆ. ಏಕೆ ಮಾರುತ್ತಿದ್ದಾರೆ ? ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ ಇವತ್ತಿನ ದಿವಸ ಯಾರೋ ಒಬ್ಬ ಅಬಲೆ ಹೆಣ್ಣುಮಗಳು, ಯಾವುದೋ ಒಂದು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಏನು ಹೆರಿಗೆಯಾಗುತ್ತಾಳೆ, ಆ ಮಗುವನ್ನು ಮಾರಿಕೊಳ್ಳುವಂಥಾದ್ದು ಏನಿದೆ ಅದಕ್ಕೆ ಅಕೌಂಟ್ ಇಲ್ಲ. ಮಕ್ಕಳನ್ನು ಮಾರುತ್ತಿರುವುದು ನಿಜ. ಆದರೆ ದುಡ್ಡು ಎಲ್ಲಿ ಹೋಗುತ್ತದೆ, ಅದು ಗೊತ್ತಿಲ್ಲ. ಮಕ್ಕಳನ್ನು ಏಕೆ ಮಾರುತ್ತಿದ್ದಾರೆ, ಅದು ಗೊತ್ತಿಲ್ಲ. ಅದನ್ನು ಕೊಂಡುಕೊಳ್ಳುವವರು ಯಾರು? ಗೊತ್ತಿಲ್ಲ. ಈ ರೀತಿ ನಿರಂತರವಾಗಿ, ವಿಶೇಷವಾಗಿ ವಾಣಿವಿಲಾಸ ಆಸ್ಪತ್ರೆಯಲ್ಲಿ ಒಂದು ಗುಂಪೇ ಆ ಕೆಲಸವನ್ನು ಮಾಡುತ್ತಿದ್ದಾರೆ. ಇದು ಎಲ್ಲಾ ಪತ್ರಿಕೆಯಲ್ಲೂ ಬಂದಿದೆ. ಅನೇಕ ದಿವಸಗಳಿಂದ ಈ ದೂರು ಇದೆ. ಆದುದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ದಯಮಾಡಿ ಇದರ ಬಗ್ಗೆ ಒಂದು ಸಿಐಡಿ ತನಿಖೆ ಮಾಡಿಸಿ. ಏಕೆಂದರೆ ಎಲ್ಲಾದಕ್ಕೂ ಸಿಐಡಿ ತನಿಖೆಯಾಗಲಿ ಎಂದು ಅಲ್ಲ. ಇದರ ಸತ್ಯಸಂಗತಿ ಹೊರಗೆ ಬರಲಿ ಎದು ಹೇಳುತ್ತಿದ್ದೇನೆ. ಇಲ್ಲಾ ಎಂದರೆ ಜ್ಯೂಡಿಷಿಯಲ್ ಎನ್‌ಕ್ವರಿಯನ್ನಾದರೂ ಮಾಡಿಸಿ. ಯಾರು ಇವತ್ತು ಗಂಡುಮಗುವನ್ನು ಕಳೆದುಕೊಂಡು ರಸ್ತೆಯಲ್ಲಿ, ಬೀದಿಯಲ್ಲಿ ಇದ್ದಾರೆ, ಅವರಿಗೆ ನ್ಯಾಯ ಒದಗಿಸಿಕೊಡಬೇಕು. ಈ ರೀತಿ ಘಟನೆಗಳು ಏನು ಪದೇ ಪದೇ ಆಗುತ್ತಿದೆ ಇದನ್ನು ಕೊನೇ ಮಾಡುವಂತಹ ಒಂದು ವಿಶೇಷ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ಸಿಐಡಿ ತನಿಖೆಯನ್ನು ಮಾಡಿಸಿ, ಆ ಹೆಣ್ಣುಮಗಳಿಗೆ ನ್ಯಾಯ ಒದಗಿಸಿಕೊಡಬೇಕು. ಮಕ್ಕಳನ್ನು ಮಾರುವಂತಹ ಘಟನೆ ಏನು ನಡೆಯುತ್ತಿದೆ ಅದು ನಿಲ್ಲಬೇಕು. ಇದು ಕೇವಲ ಬೆಂಗಳೂರು ನಗರದಲ್ಲಿ ಅಲ್ಲ ಅನೇಕ ಕಡೆ ಇದು ನಡೆಯುತ್ತಿದೆ. ಈ ಪಾಶವೀ ಕೃತ್ಯ ನಿಲ್ಲಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತೀವ್ರವಾದಂತಹ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಅವರ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತೇನೆ. ಶ್ರೀಮತಿ ಗಂಗರತ್ನಮ್ಮನವರು ವಾಣಿವಿಲಾಸ ಆಸ್ಪತ್ರೆಗೆ ಹೆರಿಗೆಗಾಗಿ ದಿನಾಂಕ 2-3-1993 ರಂದು ದಾಖಲಾದರು. ಅಂದು ಬೆಳಿಗ್ಗೆ 10.35ರಲ್ಲಿ ಗಂಡು ಮಗುವು ಜನಿಸಿತು. ಮಗುವಿನ ಕಾಲಿನ ಸುತ್ತ ಕರಳು ಬಳ್ಳಿಯು ಸುತ್ತಿಕೊಂಡಿದ್ದರಿಂದ, ಮಗುವಿಗೆ ಆಮ್ಲಜನಕವು ಸರಿಯಾಗಿ ಸರಬರಾಜಾಗದೆ ಮಗುವು ತೊಂದರೆಗೆ ಒಳಗಾಗಿತ್ತು. ಆದುದರಿಂದ ಮಗುವನ್ನು ಮಕ್ಕಳ ತುರ್ತು

ಚಿಕಿತ್ಸಾ ವಿಭಾಗಕ್ಕೆ ಸೇರಿಸಿ, ಚಿಕಿತ್ಸೆ ಮಾಡಲಾಯಿತು. ಚಿಕಿತ್ಸೆಯು ಫಲಕಾರಿಯಾಗದೆ ಮಗುವು 3-3-1993ರ ಮುಂಜಾನೆ 5.00 ಗಂಟೆಗೆ ಅಸುನೀಗಿತು. ಆ ದಿನ ಸುಮಾರು 11.00 ಗಂಟೆಗೆ ತಾಯಿಯ ಕುಟುಂಬದವರು ಮಗುವನ್ನು ನೋಡಲು ಕೇಳಿದಾಗ, ದಾದಿಯು ತಪ್ಪಾಗಿ, ಹೆಣ್ಣುಮಗುವನ್ನು ತಂದು ತೋರಿಸಿದಳು. ಆದರೆ ಕುಟುಂಬವರ್ಗದವರು ಮಗುವನ್ನು ತೆಗೆದುಕೊಳ್ಳದೆ ತಮ್ಮ ಮಗು ಗಂಡು ಮಗುವೆಂದು ತಮ್ಮ ಮಗು ಗಂಡು ಮಗುವೆಂದು ತಿಳಿಸಿದರು. ಆಗ ಆಸ್ಪತ್ರೆಯ ದಾಖಲಾತಿಗಳನ್ನು ಪರಿಶೀಲಿಸಿ, ಆ ಗಂಡು ಮಗು ಅಸು ನೀಗಿದ್ದನ್ನು ಕಂಡು ವಾರ್ಡಿನ ಪಕ್ಕದ ಕೋಣೆಯಲ್ಲಿದ್ದ ಸತ್ತ ಮಗುವಿನ ದೇಹವನ್ನು ತಾಯಿಗೆ ಸುಮಾರು ಮಧ್ಯಾಹ್ನ 12.30 ಗಂಟೆಗೆ ಒಪ್ಪಿಸಲಾಯಿತು. ಆಗ ತಾಯಿಯ ಕುಟುಂಬದವರು, ತಮ್ಮ ಮಗುವನ್ನು ಆಸ್ಪತ್ರೆಯವರು ಮಾರಿಬಿಟ್ಟಿದ್ದಾರೆಂದು ಆಪಾದನೆ ಮಾಡಿ, ಗಲಾಟೆಯನ್ನೆಬ್ಬಿಸಿ, ಕೆಲವು ಸಿಬ್ಬಂದಿಯವರನ್ನು ಹೊಡೆಯಲು ಯತ್ನಿಸಿದರು. ಈ ಬಗ್ಗೆ ಪೊಲೀಸಿನವರಲ್ಲಿ ದೂರು ಕೊಟ್ಟರು. ಪೊಲೀಸಿನವರು ಅಸುನೀಗಿದ ಶಿಶುವಿನ ಹಾಗೂ ತಾಯಿಯ ಸಂಬಂಧವನ್ನು ದೃಢಗೊಳಿಸಲು ಡಿ.ಎನ್.ಎ. ಹಾಗೂ ಬೋನ್ ಮಾರೊ ಪ್ರಿಂಟ್‌ಗಳನ್ನು ಕಳುಹಿಸಿ ತಜ್ಞರ ವರದಿಗೋಸ್ಕರ ಕಾಯುತ್ತಿದ್ದಾರೆ. ಅವರ ಸಂಶಯ ನಿವಾರಣೆ ಮಾಡುವುದಕ್ಕೆ, ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರವಹಿಸಲು ಎಲ್ಲಾ ಆಸ್ಪತ್ರೆಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ. ಅದಲುಬದಲು ಆಗಬಹುದೆಂಬ ಅನಿಸಿಕೆಯನ್ನು ತಪ್ಪಿಸಲು ತಾಯಿಯ ಹಾಗೂ ಮಗುವಿನ ಕೈ ಮೇಲೆ ಸುಲಭವಾಗಿ ಅಳಿಸಲಾರದ ಶಾಯಿಯಿಂದ ಗುರುತು ಮಾಡಲು ತಿಳಿಸಲಾಗಿದೆ. ಇದಲ್ಲದೆ, ಹೆರಿಗೆಯ ಸಮಯದಲ್ಲಿ ತಾಯಿಯ ಸಂಬಂಧಿಕರು ಹತ್ತಿರ ಇರುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಪ್ರಕರಣದಲ್ಲಿ ತಪ್ಪಾಗಿ ಹೆಣ್ಣುಮಗುವನ್ನು ತೋರಿಸಿ ಗೊಂದಲ, ಗಲಭೆಗೆ ಕಾರಣಳಾದ ದಾದಿಯನ್ನು ಅಮಾನತ್ತಿನಲ್ಲಿಡಲಾಗಿದೆ. ಬೆಂಗಳೂರಿನ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಿಗೆ ಈ ಘಟನೆಯನ್ನು ಆಮೂಲಾಗ್ರವಾಗಿ ತನಿಖೆ ಮಾಡಿ ತಕ್ಷಣ ವರದಿ ಸಲ್ಲಿಸಲು ಆದೇಶಿಸಲಾಗಿದೆ. ಇದು ಒಂದು ರೀತಿಯ ಗೊಂದಲವಾಗಿದೆ. ಇಲ್ಲಿ ಮಿಸ್ಟೇಕ್ ಏನಾಗಿದೆ ಎಂದರೆ, ಗಂಗರತ್ನಮ್ಮನ ಮಗು ಸತ್ತ ತಕ್ಷಣ ತಾಯಿಗೆ ಹೇಳಬೇಕಾಗಿತ್ತು. ಆ ರೀತಿ ಹೇಳದೆ ದಾದಿ ಮತ್ತೊಬ್ಬರ ಮಗುವನ್ನು ತೋರಿಸಿಬಿಟ್ಟಿದ್ದಾರೆ. ಈ ತಪ್ಪಿನಿಂದ ಈ ರೀತಿಯ ಅಸ್ತವ್ಯಸ್ತವಾಗಿದೆಯೇ ಹೊರತು ಗಂಗರತ್ನಮ್ಮನ ಮಗು ತೀರಿಕೊಂಡಿದೆ. ಆಧರೂ ಕೂಡ ಸಾರ್ವಜನಿಕರಲ್ಲಿ ಬಂದಂತಹ ಅನುಮಾನ, ಶಂಕೆ, ತಾಯಿಗೆ ಬರಬಾರದೆಂದು ಈಗಾಗಲೇ ಹೈದರಾಬಾದ್‌ಗೆ ಟಿಸ್ಸ್‌ಗೆ ಕಳುಹಿಸಿದ್ದಾರೆ. ಇದು ಮಾರ್ಡನ್ ಟೆಕ್ನಾಲಜಿ ಇದೆ. ಅದೇನೂ ಕಷ್ಟವಿಲ್ಲ. ಅದರ ವರದಿ ತಕ್ಷಣ ತರಿಸುತ್ತೇವೆ. ಈ ರೀತಿಯ ಅನುಮಾನಕ್ಕೆ ಮುಂದೆ ಅವಕಾಶ ಆಗಬಾರದೆಂದು ಕೆಲವು ವ್ಯವಸ್ಥೆಯನ್ನು ನಾವು ಮಾಡಿದ್ದೇವ. ಇದು ಅನುಮಾನದ ಫಲಶೃತಿಯೇ ಹೊರತು ಅದಲುಬದಲಿನ ಪ್ರಶ್ನೆಯೆ ಇಲ್ಲ. ಅದರೂ ಕೂಡ ಫರೆಂಟ್‌ಜನ್ನು ಫರ್ದರ್ ಪ್ರೂವ್ ಮಾಡಿ ಸಾರ್ವಜನಿಕರ ಮನಸ್ಸಿನಲ್ಲಿ ಸ್ಪಷ್ಟವಾದಂತಹ ತಿಳುವಳಿಕೆಯನ್ನು ಕೊಡುವ ದೃಷ್ಟಿಯಿಂದ ಇದನ್ನು ಟಿಸ್ಸ್‌ಗೆ ಕಳುಹಿಸಿದ್ದೆವೆ. ನಾವು ಈಗ ಚರ್ಚೆ ಮಾಡಿ ಒಬ್ಬರ ಮಗುವನ್ನು ಮತ್ತೊಬ್ಬರಿಗೆ ಕೊಡುವುದಕ್ಕೆ ಆಗುವುದಿಲ್ಲ. ಚರ್ಚೆ ಏನು ಇದೆ, ಟಿಸ್ಸ್ ರಿಪೋರ್ಟ್ ಬರಲಿ, ಚರ್ಚೆ ಮಾಡಿದಾಕ್ಷಣಕ್ಕೆ ನಾವು ಒತ್ತಡಕ್ಕೆ ಒಳಗಾಗಿ ನಿಜವಾದಂತಹ ತಾಯಿಯ ಮಗುವನ್ನು ತೆಗೆದು ಬೇರೆಯವರಿಗೆ ಕೊಡುವುದಕ್ಕೆ ಆಗುತ್ತದೆಯೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಗಂಡುಮಗು ಇದ್ದಿದ್ದರೆ ನಾನು ಬೇರೆ

ಮಗುವನ್ನು ತಂದುಕೊಡಿ ಎಂದು ಹೇಳುವುದಕ್ಕೆ ನಾನು ಯಾರು. ಅದನ್ನು ಅವರು ಒಪ್ಪುವುದಕ್ಕೆ ಸಾಧ್ಯವೇ? ಅದಲ್ಲ ಪ್ರಶ್ನೆ. ತಾವೇ ಹೇಳಿದಂತೆ ಹುಟ್ಟಿದ್ದು ಗಂಡು ಮಗು, ತೋರಿಸಿದ್ದು ಹೆಣ್ಣುಮಗು, ಸತ್ತ ಹೆಣ್ಣು ಮಗುವನ್ನು ತೋರಿಸಿದ್ದರೆ ನಾನು ವಿರೋಧ ಮಾಡುತ್ತಿರಲಿಲ್ಲ, ತಪ್ಪಾಗಿದೆ ಎಂದು ಹೇಳುತ್ತಿದ್ದೆ. ಅಲ್ಲಿ ಅವರು ಹಾಲು ಕುಡಿಸುವುದಕ್ಕೆ ಕರೆದುಕೊಂಡು ಹೋಗಿದ್ದಾರೆ. ಸ್ವತಃ ನಾನೇ ಹೋಗಿ ನೋಡಿ ಬಂದಿದ್ದೇನೆ. ಯಾವ ತಾಯಿ ಇವತ್ತು ನಮ್ಮ ಸಮಾಜದಲ್ಲಿ ಅದಲುಬದಲು ಆದಂತಹ ಮಗುವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಅಥವಾ ತನ್ನ ಮಗು ಸತ್ತಿದ್ದರೆ ಒಪ್ಪಿಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತಾಳೆ. ಸತ್ತಿದ್ದು ನಿಜವಾದರೆ ಆ ಮಗು ಸತ್ತ ತಕ್ಷಣ ತಿಳಿಸಲಿಲ್ಲ. ಅವಳನ್ನು ಹಾಲು ಕುಡಿಸುವುದಕ್ಕೆ ಕರೆದುಕೊಂಡು ಹೋದದ್ದು ಆಸ್ಪತ್ರೆ ಸಿಬ್ಬಂದಿ, ತೋರಿಸಿದ್ದು ಹೆಣ್ಣುಮಗುವನ್ನು. ಪ್ರತಿಭಟನೆ ಮಾಡಿದಮೇಲೆ ಸಂಬಂಧಪಟ್ಟ ದಾಖಲೆಗಳನ್ನು ಇಟ್ಟುಕೊಂಡ ಮೇಲೆ ಅನಿವಾರ್ಯವಾಗಿ ಇನೊಂದು ಸತ್ತ ಗಂಡುಮಗುವನ್ನು ತೋರಿಸಿರತಕ್ಕದ್ದು ಒಂದು. ಸನ್ಮಾನ್ಯ ಮುಖ್ಯಮಂತ್ರಿಯವರೆ, ಕೇವಲ ಇದೊಂದೇ ಘಟನೆಯಲ್ಲ, ನಾನು ಜವಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹೇಳುತ್ತಿದ್ದೇನೆ. ನೀವು ಬೇಕಾದರೆ ಯಾರನ್ನಾದರೂ ಕಳುಹಿಸಿ ಎನ್‌ಕ್ವರಿ ಮಾಡಿಸಿ ತಿಳಿದುಕೊಳ್ಳಬಹುದು. ಈ ರೀತಿ ಹತ್ತಾರು ಘಟನೆಗಳು ಆಗಿವೆ. ಅಮಾಯಕ ಹೆಣ್ಣುಮಕ್ಕಳಿಗೆ ಹೆರಿಗೆಯಾದ ನಂತರ ಅವರ ಮಕ್ಕಳನ್ನು ಮಾರುವಂತಹ ವ್ಯವಸ್ಥಿತವಾದಂತಹ ಜಾಲವಿದೆ. ಈಗ ನಾನು ಹೇಳಿದ್ದುದು ತಮಗೆ ಮನದಟ್ಟಾಗಿರಬಹುದು. ಇದೊಂದರ ಬಗ್ಗೆ ಎನ್‌ಕ್ವರಿ ಮಾಡಿ ಎಂದು ಹೇಳುತ್ತಿಲ್ಲ. ಈ ರೀತಿ ಮಕ್ಕಳನ್ನು ಮಾರುತ್ತಿರುವಂಥ ಜಾಲವಿದೆ. ಈ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಅಲ್ಲಿ ಅದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಈ ಸಮಯದಲ್ಲಿ ಇದನ್ನು ಎನ್‌ಕ್ವಯರಿ ಮಾಡಿಸಿ. ಇದನ್ನೂ, ಅದನ್ನೂ ಎರಡನ್ನೂ ಸೇರಿಸಿ ಮಾಡಿ. ದೇವರ ದಯೆಯಿಂದ ಮೂಳೆ ತಜ್ಞರಿಂದ ಪರೀಕ್ಷೆಯಾಗಿ ಅದಲ್ಲ ಅಂದರೆ ನಾನು ಗೊಂದಲ ಮಾಡಬೇಕು ಎಂದು ಹೇಳುವುದಿಲ್ಲ. ಈ ರೀತಿ ಅನೇಕ ಗೊಂದಲದ ವಾತಾವರಣ ಇದ್ದು ಮಕ್ಕಳನ್ನು ಮಾರುವಂಥ ವ್ಯವಸ್ಥಿತವಾದ ಜಾಲ ಇರುವುದರಿಂದ ದಯಮಾಡಿ ಸಿಓಡಿ ಗೆ ವಹಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆಗಳು

1. ಸಿಂಧನೂರು ತಾಲ್ಲೂಕಿನ ಸಹಕಾರಿ ಸಂಘದ ವ್ಯಾಪ್ತಿಗೆ ಸೇರಿದ ಜಿನ್ನಿಂಗ್ ಮತ್ತು ಪ್ರೆಸಿಂಗ್ ಘಟಕವನ್ನು ಗುತ್ತಿಗೆ ನೀಡಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಸಭಾಧ್ಯಕ್ಷರೆ, ಸಿಂಧನೂರು ತಾಲ್ಲೂಕಿನ ಸಹಕಾರಿ ಸಂಘದ ವ್ಯಾಪ್ತಿಯಲ್ಲಿ ಬರುವ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಘಟಕವನ್ನು ಸರ್ಕಾರ ಹಾಕಿದ ನಿಬಂಧನೆಗಳನ್ನು ಉಲ್ಲಂಘಿಸಿ ಗುತ್ತಿಗೆ ನೀಡಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಮಾಡಿರುವ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಸಹಕಾರ ಸಚಿವರು) ಮಾನ್ಯ ಸಭಾಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಸಿಂಧನೂರು ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘವು ತನ್ನ ಹತ್ತಿ ಅರೆಯುವ (ಜಿನ್ನಿಂಗ್) ಘಟಕವನ್ನು 1974ರಲ್ಲಿ ಸರ್ಕಾರದಿಂದ ಷೇರು ರೂ. 75,000-00 ಹಾಗೂ ಅನುದಾನ ರೂ. 70,000-00 ಒಟ್ಟು ರೂ. 1,45,000-00 ಗಳನ್ನು ಪಡೆದು